2

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**288 (105)**
ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	16.07.2019
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ.	ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ, ಪ್ರೌಢಶಾಲೆಯಿಂದ ಪದವಿ ಪೂರ್ವ ಕಾಲೇಜಿಗೆ ಬಡ್ತಿ ಪಡೆದಿರುವವರಿಗೆ ಹಿಂದಿನ ಸೇವೆಯನ್ನು ಪರಿಗಣಿಸಿ 15, 20, 25 ವರ್ಷದ ಕಾಲಮಿತಿ ಬಡ್ತಿಯನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬಂದಿದೆ.
ಆ.	ಹಾಗಿದ್ದಲ್ಲಿ, ಕಾಲಮಿತಿ ಬಡ್ತಿಯನ್ನು ಇದುವರೆಗೆ ನೀಡದಿರಲು ಕಾರಣಗಳೇನು; (ವಿವರ ನೀಡುವುದು)	ಕರ್ನಾಟಕ ಸರ್ಕಾರಿ ಸೇವಾ ನಿಯಮಗಳು ಕರ್ನಾಟಕ ಸರ್ಕಾರಿ (ಕಾಲಬದ್ಧ ಮುಂಬಡ್ತಿ) ನಿಯಮಗಳು 1983ರ ಉಪ ನಿಯಮ-3ರಲ್ಲಿ ಕಾಲಬದ್ಧ ಮುಂಬಡ್ತಿ ನೀಡಿಕೆ ಮತ್ತು ಆ ಸಂಬಂಧವಾದ ಅರ್ಹತಾ ಷರತ್ತುಗಳು; ಈ ಕೆಳಕಂಡಂತಿದೆ. ನೇಮಕ ಪ್ರಾಧಿಕಾರವು ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ಧಿಷ್ಟ ಪಡಿಸಿದ ವೇತನ ಶ್ರೇಣಿಯಿರುವ ಹುದ್ದೆಯನ್ನು ಧಾರಣ ಮಾಡಿರುವ ಸರ್ಕಾರಿ ನೌಕರರಿಗೆ ಅದರ ಸಂವಾದಿ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಆಯ್ಕೆ ಕಾಲಬದ್ಧ ವೇತನ ಶ್ರೇಣಿಯನ್ನು, ಎ) ಅವನು ಧಾರಣ ಮಾಡಿದ ಹುದ್ದೆಯಲ್ಲಿ ಸ್ಥಳೀಯ ಅಭ್ಯರ್ಥಿಯಾಗಿ ವರ್ಕ್‌ಚಾರ್ಜ್ ಸಿಬ್ಬಂದಿಯಾಗಿ ಮತ್ತು ಬಡ್ತಿಗಾಗಿ ಜೇಷ್ಟತಾ ಹುದ್ದೆ ಕೋರುವ ಉದ್ದೇಶಕ್ಕಾಗಿ ತೆಗೆದುಕೊಳ್ಳಲಾಗದ ಯಾವುದೇ ಇತರ ಸೇವೆಯನ್ನು ಹೊರತುಪಡಿಸಿ **ಹತ್ತು ವರ್ಷಗಳಿಗಿಂತ** ಕಡಿಮೆಯಿಲ್ಲದಷ್ಟು ಅವಧಿಯವರೆಗೆ ಅವನು ಸೇವೆ ಸಲ್ಲಿಸಿದರೆ ಮತ್ತು ಅವನ ಸೇವೆ ದಾಖಲೆ ತೃಪ್ತಿಕರವಾಗಿದ್ದಲ್ಲಿ ಮತ್ತು ಅವನಿಗೆ ಅನ್ವಯಿಸುವ ನೇಮಕಾತಿ ನಿಯಮಗಳಿಗೆ ಅನುಸಾರವಾಗಿ ಬಡ್ತಿಗೆ ಅವನು ಅರ್ಹನಿದ್ದರೆ ನೀಡತಕ್ಕದ್ದು. ಬಿ) 1ನೇ ಏಪ್ರಿಲ್ 1982ರಂದು ಅಥವಾ ತರವಾಯ ಯಾವುದೇ ದಿನಾಂಕದಂದು ಆತನು ಧಾರಣ ಮಾಡಿದ ಹುದ್ದೆಯಲ್ಲಿ 10 ವರ್ಷಕ್ಕಿಂತ ಕಡಿಮೆಯಿಲ್ಲದ್ದಷ್ಟು ಅವಧಿಯವರೆಗೆ ಸೇವೆ ಸಲ್ಲಿಸಿದರೆ ಅಂತಹ ದಿನಾಂಕದಿಂದ ಜಾರಿಗೆ ಬರುವಂತೆ ಆಯ್ಕೆಯ ಕಾಲಬದ್ಧ ಸಂವಾದಿ ವೇತನ ಶ್ರೇಣಿಯನ್ನು ಅವನಿಗೆ ಅನುಮತಿಸಬಹುದು. 1982ರ ಕರ್ನಾಟಕ ಸರ್ಕಾರಿ ಸೇವಾ (ಪರಿಷ್ಕೃತ ವೇತನ) ನಿಯಮಗಳಿಗೆ 7ನೇ ನಿಯಮದ ಮೇರೆಗೆ ಬಡ್ತಿ ಪಡೆಯುವವರೆಗೆ ಮುಂದುವರಿಯಲು ಆಯ್ಕೆ ಮಾಡಿಕೊಂಡಿರುವ ಸರ್ಕಾರಿ ನೌಕರನ ಪ್ರಕರಣದಲ್ಲಿ ಮುಂದಿನ ಅಥವಾ ಅನಂತರದ ವೇತನ ಮಾಡಿ ಆ ದಿನಾಂಕದಿಂದಲೇ ಆಯ್ಕೆಯ ಕಾಲಬದ್ಧ

		ಶ್ರೇಣಿಯನ್ನು ಕೊಡಬಹುದು. ಅಷ್ಟೇ ಅಲ್ಲದೆ ಯಾರೇ ಸರ್ಕಾರಿ ನೌಕರನು ತಾನು ಮುಂದಿನ ಅಥವಾ ಯಾವುದೇ ತರುವಾಯದ ವೇತನ ಬಡ್ತಿಯನ್ನು ಗಳಿಸುವವರೆಗೂ ಹಾಲಿ ಇರುವ ವೇತನ ಶ್ರೇಣಿಯಲ್ಲೇ ಮುಂದುವರಿಯುವನೆಂದು 1982ರ ಕರ್ನಾಟಕ ಸರ್ಕಾರಿ ಸೇವಾ (ವೇತನ ಪರಿಷ್ಕರಣೆ) ನಿಯಮಗಳ 7ನೇ ನಿಯಮದ ಮೇರೆಗೆ ಆಯ್ಕೆ ಮಾಡಿಕೊಂಡಿದ್ದರೆ ತಾನು ಹಾಲಿ ಇರುವ ವೇತನ ಶ್ರೇಣಿಯನ್ನು ಕೋರಿದ್ದಲ್ಲಿ ಅವನು ಚಲಾಯಿಸಿದ ಆಯ್ಕೆ ಸಿಂಧುವಾಗತಕ್ಕದ್ದಲ್ಲ ಮತ್ತು ಆತನ ಆಯ್ಕೆಯ ಅವಕಾಶವನ್ನು ಚಲಾಯಿತವೆಂಬಂತೆ ಪರಿಗಣಿಸಿ ಪರಿಷ್ಕೃತ ಶ್ರೇಣಿಯಲ್ಲಿ ಅವನು ವೇತನವನ್ನು ನಿಗದಿಪಡಿಸಿದ ಅವನಿಗೆ ಆಯ್ಕೆ ಶ್ರೇಣಿಯ ವೇತನವನ್ನು ಮಂಜೂರು ಮಾಡಬಹುದು.
ಇ.	ಬಡ್ತಿ ಪಡೆದ ಶಿಕ್ಷಕರಿಗೆ ಹಿಂದಿನ ಸೇವೆಯನ್ನು ಪರಿಗಣಿಸಿ, ಕಾಲಮಿತಿ ಬಡ್ತಿಯನ್ನು ನೀಡದಿರುವುದರಿಂದ ಮಾಸಿಕ ವೇತನದಲ್ಲಿ ಕಡಿಮೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹಿಂದಿನ ಸೇವೆಯನ್ನು ಪರಿಗಣಿಸಿ ಕಾಲಮಿತಿ ಬಡ್ತಿಯನ್ನು ನೀಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.
ಈ	ಹಾಗಿದ್ದಲ್ಲಿ, ಈ ವ್ಯತ್ಯಾಸವನ್ನು ಸರಿಪಡಿಸಲು ಯಾವ ಕಾಲಮಿತಿಯಲ್ಲಿ ಕ್ರಮ ವಹಿಸಲಾಗುವುದು?	ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಇಪಿ 26 ಎಸ್‌ಓಹೆಚ್ 2019

(ಎಸ್. ಆರ್ ಶ್ರೀನಿವಾಸ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.